


# ಸೂಪರ್ ಆ್ಯಪ್
# ರೈಲ್ವೆಗೆ ಹೊಸ ಸ್ಪರ್ಶ



■ **ಶಶಿಕುಮಾರ್ ಸಿ.**

ರೈಲ್ವೆ ಇಲಾಖೆಗೆ ಸಂಬಂಧಿಸಿದ ಎಲ್ಲ ಸೇವೆಗಳನ್ನು ಒಂದೇ ಆ್ಯಪ್‌ನಡಿ ಒದಗಿಸುವ ಕಾರ್ಯಕ್ಕೆ 'ರೈಲ್ವೆ ಇಲಾಖೆ'ಯು ಮುಂದಾಗಿದ್ದು, ಡಿಸೆಂಬರ್ ಅಂತ್ಯದೊಳಗೆ ಹೊಸ ಆ್ಯಪ್ ಗ್ರಾಹಕರ ಕೈಸೇರಲಿದೆ. ಟಿಕೆಟ್ ಬುಕ್ಕಿಂಗ್, ಪ್ಲಾಟ್‌ಫಾರ್ಮ್ ಪಾಸ್, ಪಿಎನ್‌ಆರ್ ಸ್ಥಿತಿ ಹಾಗೂ ರೈಲು ಸಂಚಾರದ ಸಮಯ ತಿಳಿದುಕೊಳ್ಳುವುದು ಸೇರಿದಂತೆ ಭಾರತೀಯ ರೈಲಿಗೆ ಸಂಬಂಧಿಸಿದ ಎಲ್ಲ ಮಾಹಿತಿಯು ಇನ್ನು ಮುಂದೆ ಒಂದೇ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಲಭ್ಯವಾಗಲಿದೆ. ಈ ಸೂಪರ್ ಆ್ಯಪ್ ಅನ್ನು ಕೇಂದ್ರೀಯ ರೈಲ್ವೆ ಮಾಹಿತಿ ವ್ಯವಸ್ಥೆ (CRIS) ಅಭಿವೃದ್ಧಿಪಡಿಸುತ್ತಿದೆ.

ಟಿಕೆಟ್ ಪಡೆಯಲು ಐಆರ್‌ಸಿಟಿಸಿ ರೈಲ್ ಕನೆಕ್ಟ್ ಆ್ಯಪ್, ರೈಲಿನಲ್ಲಿ ಆಹಾರ ಪಡೆಯಲು ಐಆರ್‌ಸಿಟಿಸಿ ಇ–ಕೇಟರಿಂಗ್, ರೈಲ್ವೆ ಸಂಬಂಧಿತ ಪ್ರತಿಕ್ರಿಯೆಗಳಿಗಾಗಿ ರೈಲ್ ಮದದ್, ಮುಂಗಡ ಕಾಯ್ದಿರಿಸದ ಟಿಕೆಟ್ ಪಡೆಯಲು ಯುಟಿಎಸ್, ರೈಲಿನ ಸಂಚಾರ ಸ್ಥಳದ ಬಗ್ಗೆ ತಿಳಿದುಕೊಳ್ಳಲು ನ್ಯಾಷನಲ್ ಟ್ರೈನ್ ಎನ್‌ಕ್ವೈರಿ ಸಿಸ್ಟಂ ಆ್ಯಪ್ ಹಾಗೂ ರೈಲ್ವೆ ವೆಬ್‌ಸೈಟ್ ಸದ್ಯ ಬಳಕೆಯಲ್ಲಿವೆ. ಈ ಸೂಪರ್ ಆ್ಯಪ್ ಹಾಗೂ ಹಾಲಿ ಇರುವ ಆ್ಯಪ್‌ಗಳನ್ನು ಲಿಂಕ್ ಮಾಡುವ ಕಾರ್ಯ ಪ್ರಗತಿಯಲ್ಲಿದೆ.

ರೈಲ್ವೆ ಇಲಾಖೆಗೆ ಸಂಬಂಧಿಸಿದಂತೆ ಬಳಕೆಯಲ್ಲಿರುವ ಆ್ಯಪ್‌ಗಳ ಪೈಕಿ 'ಐಆರ್‌ಸಿಟಿಸಿ ರೈಲ್ ಕನೆಕ್ಟ್ ಆ್ಯಪ್' ಅನ್ನು ಸುಮಾರು 10 ಕೋಟಿ ಜನರು ಬಳಸುತ್ತಿದ್ದಾರೆ. ಮುಂಗಡವಾಗಿ ಟಿಕೆಟ್ ಕಾಯ್ದಿರಿಸುವ ಸಲುವಾಗಿ ಅತಿ ಹೆಚ್ಚು ಬಳಕೆಯಲ್ಲಿರುವ ಆ್ಯಪ್ ಇದಾಗಿದ್ದು, ಇದನ್ನು ಆಧಾರವಾಗಿಟ್ಟುಕೊಂಡು ಗ್ರಾಹಕರಿಗೆ ಇನ್ನಷ್ಟು ಅನುಕೂಲಕರ ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸಲು ಸೂಪರ್ ಆ್ಯಪ್‌ಗೆ ಕೈಹಾಕಲಾಗಿದೆ. ಈ ಆ್ಯಪ್ ಮೂಲಕ ಆನ್‌ಲೈನ್ ಟಿಕೆಟ್ ಬುಕ್ಕಿಂಗ್ ಪ್ರಕ್ರಿಯೆಯನ್ನು ಉತ್ತೇಜಿಸುವ ಹಾಗೂ ಆದಾಯ ಹೆಚ್ಚಿಸುವ ಚಿಂತನೆ ರೈಲ್ವೆ ಇಲಾಖೆಗೆ ಇದೆ.

### ಅಧಿಕ ಆದಾಯಕ್ಕೆ ಅಡಿಪಾಯ

ಸೂಪರ್ ಆ್ಯಪ್‌ನ ಹಿಂದೆ, ರೈಲ್ವೆ ಇಲಾಖೆಗೆ ಬರುತ್ತಿರುವ ಆದಾಯವನ್ನು ಇನ್ನಷ್ಟು ಹೆಚ್ಚಿಸುವ ಉದ್ದೇಶವಿದೆ. ತಾಂತ್ರಿಕ ಮೂಲಸೌಕರ್ಯ ಕಲ್ಪಿಸುವ ಮೂಲಕ ಇಲಾಖೆಯ ಸೇವೆಗಳನ್ನು ವ್ಯಾಪಕವಾಗಿ ವಿಸ್ತರಿಸುವ ಯೋಜನೆ ಇದೆ. ಇದರಿಂದಾಗಿ ಆದಾಯದ ಪ್ರಮಾಣವೂ ಹೆಚ್ಚಲಿದೆ ಎನ್ನುವುದು ಇಲಾಖೆಯ ನಿರೀಕ್ಷೆ.

ಐಆರ್‌ಸಿಟಿಸಿ ಪ್ರಕಾರ, '2023–24ನೇ ಸಾಲಿನಲ್ಲಿ ರೈಲ್ವೆ ಇಲಾಖೆಯು ಒಟ್ಟು ₹4270 ಕೋಟಿ ಆದಾಯ ಗಳಿಸಿದೆ. ಈ ಪೈಕಿ ₹1111 ಕೋಟಿಯಷ್ಟು ಲಾಭಾಂಶವಾಗಿದೆ'. ಮುಂಗಡ ಬುಕ್ಕಿಂಗ್‌ನಿಂದ 45 ಕೋಟಿ ಟಿಕೆಟ್‌ಗಳು ಮಾರಾಟವಾಗಿದ್ದು, ಇಲಾಖೆ ಗಳಿಸಿದ ಒಟ್ಟು ಆದಾಯದ ಶೇಕಡ 30ರಷ್ಟು ಪಾಲು ಟಿಕೆಟ್ ಮಾರಾಟದಿಂದಲೇ ಬಂದಿದೆ. ಇನ್ನು ಯುಟಿಎಸ್ ಅಪ್ಲಿಕೇಷನ್ ಮೂಲಕ ಪ್ಲಾಟ್‌ಫಾರ್ಮ್ ಟಿಕೆಟ್ ಹಾಗೂ ಸೀಸನ್ ಪಾಸ್ ಡೌನ್‌ಲೋಡ್ ಮಾಡಲು ಸಾಧ್ಯ. ಇದು ಈಗಾಗಲೇ ಒಂದು ಕೋಟಿ ಬಾರಿ ಬಳಕೆಯಾಗಿದೆ ಎಂಬುದು ರೈಲ್ವೆ ಇಲಾಖೆಯ ಪ್ರಕಟಣೆ. ■

## ಬರ್ತಿದ್ದಾನೆ 'ಎಐ' ಏಜೆಂಟ್

'ಚಾಟ್‌ಜಿಪಿಟಿ' ಎಂಬ ಮಾಯಾ ತಂತ್ರಜ್ಞಾನ ಅಭಿವೃದ್ಧಿಪಡಿಸಿ ವಿಶ್ವದೆಲ್ಲೆಡೆ ಹೊಸ ಅಲೆಯನ್ನು ಸೃಷ್ಟಿಸಿರುವ ಓಪನ್‌ಎಐ, 'ಆಪರೇಟರ್' ಎಂಬ ಎಐ ಏಜೆಂಟ್ ಅನ್ನು ಸೃಷ್ಟಿಸಿದೆ. ಇಲ್ಲಿ 'ಆಪರೇಟರ್' ಎಂದರೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧರಿತವಾಗಿ ಕಾರ್ಯನಿರ್ವಹಿಸುವ ಕೆಲಸಗಾರ ಎಂದು ಹೇಳಬಹುದು.

ಓಪನ್‌ಎಐ ಅಭಿವೃದ್ಧಿಪಡಿಸಿರುವ ಈ 'ಆಪರೇಟರ್', ಆಟೊಮೇಟೆಡ್ ಕಂಪ್ಯೂಟರ್ ಟಾಸ್ಕ್‌ಗಳನ್ನು ನಿರ್ವಹಿಸುತ್ತಾನೆ. ಅಂದರೆ ಕೋಡ್ ಬರೆಯುವಿಕೆ, ಟ್ರಾವೆಲ್ ಬುಕ್ಕಿಂಗ್ (ಪ್ರವಾಸಕ್ಕೆ ಸಂಬಂಧಿಸಿದ ಸಂಚಾರ, ಊಟ, ವಸತಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಈ ಕೃತಕ ಬುದ್ಧಿಮತ್ತೆ ಏಜೆಂಟ್ ನೋಡಿಕೊಳ್ಳುತ್ತಾನೆ) ನಿರ್ವಹಣೆ ಮಾಡುತ್ತಾನೆ. ಮನುಷ್ಯನ ದೈನಂದಿನ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲ ಬಳಕೆಯನ್ನು ಕಡಿಮೆಗೊಳಿಸುವ ಉದ್ದೇಶದಿಂದ ಈ ಏಜೆಂಟ್ ಅನ್ನು ಕಂಪನಿಯು ಅಭಿವೃದ್ಧಿಪಡಿಸಿದೆ. ಕನಿಷ್ಠ ಮಾನವ ಸಂಪನ್ಮೂಲ ಬಳಸಿಕೊಂಡು ಮಲ್ಟಿ ಸ್ಟೆಪ್ ಟಾಸ್ಕ್‌ಗಳನ್ನು ಬಹುಬೇಗ ಮಾಡುವ ಕಾರ್ಯವಿಧಾನ ಇದಾಗಿದೆ. ■